## ಪದಬಂಧ



**ಎಡದಿಂದ ಬಲಕ್ಕೆ**

1. ಆಚಮನವನ್ನು ಮಾಡಿಯೇ ಪೂಜಾರಂಭ; ಆ ಕ್ರಮ ಪಾರಂಪರಿಕ 4
3. ಅವರಿವರ ಆತಿಥ್ಯಕ್ಕೇ ವ್ಯಯವಾಯಿತು ವಾರದ ಕೊನೆ 3
4. ನೆಲವನ್ನು ಒತ್ತರಿಸಲು ಹೋಗಿ ಏನೋ ಹೆಚ್ಚುಕಡಿಮೆ ಆಗಿದೆ 3
6. ಅವನ ಆಶಯಗಳನ್ನೆಲ್ಲ ವಿವರಿಸುವ ಅಗತ್ಯ ಏನಿಲ್ಲ 4
7. ಪುಣ್ಯಕಾಲದ ಜಳಕವನ್ನು ಮಾಡಬಂದವರು ನೂರುಸಾವಿರ ಮನುಷ್ಯರು 4
9. ತಾವರೆಯನ್ನೆಲ್ಲ ಸಂಗ್ರಹಿಸಿ ತಂದ ನಂತರ? 4
12. ದೇವತೆಗಳನ್ನೇ ಹೋಲುವಂತೆ ಹಣ ಹೊಂದಿರುವಾಕೆ 4
14. ಮಂಡಿಯೂರಿ ಸುತ್ತ ನೋಡುತ್ತಿರುವವನ ಮುಖ ಹೇಗಾಗಿದೆ ನೋಡಿ 3
15. ಕೈಂಕರ್ಯವೂ ಕೂಡ ಒಂದು ಬಗೆಯ ದುಡಿಮೆಯೇ ತಾನೇ? 3
16. ಅನ್ಯಾಯವನ್ನು ವಿರೋಧಿಸದೆ ಬೇರೆ ಮಾರ್ಗವೇ ಇಲ್ಲ 4

**ಮೇಲಿನಿಂದ ಕೆಳಕ್ಕೆ**

1. ಅತ್ಯಾಸೆಯನ್ನು ತ್ಯಜಿಸುವುದು ಆತನಿಗೆ ಅತ್ಯಗತ್ಯ 4
2. ವಕಾಲತ್ತನ್ನು ವಹಿಸಲು ತಕ್ಕದ್ದು ಈ 'ಹೊಸ ಸಮಯ' 4
3. ವಿಚಾರವನ್ನೆಲ್ಲ ಬರೆದಿಟ್ಟು ಓದುವ ಕೆಲಸ 3
5. ಸರೋವರದ ಗುಲಾಬಿಯಂತೆ ಕಂಡದ್ದು ತಾವರೆ ತಾನೇ? 3
6. ಆಸೆಗೆ ತಕ್ಕಂತೆ ನಡೆಯುತ್ತಿದ್ದ ಕಾಲ ಮುಳುಗಿಹೋಯಿತು 4
8. ಈಶ್ವರನಂತೆ ಕಂಡರೂ ಅನಿತ್ಯತೆ ಬಿಡದು 4
10. ಇರುಸುಮುರುಸು ಆಗುವಂತೆ ಮಾಡಿದ್ದು ಇದೇ ಶುಲ್ಕ 3
11. ಚಪ್ಪಡಿಯನ್ನು ಸಾಗಿಸುವ ವೇಳೆಗೆ ತಳಹದಿಯೇ ತಲೆಕೆಳಗಾಯಿತು 4
12. ಕ್ಷಾಮಡಾಮರ ಕಾಡುವಾಗ ಮಾಡಬೇಕಾದ 'ಪುಣ್ಯತರುವ ಕೆಲಸ' 4
13. ಕವಚ ಧರಿಸಿ ಮಾರುವೇಷದಲ್ಲಿ ಬಂದವ ಒಬ್ಬ ಮೋಸಗಾರ 3

---

### 07—12—2023 ಉತ್ತರಗಳು

**ಎಡದಿಂದ ಬಲಕ್ಕೆ**

1. ಉದಾಸೀನ 3. ಆಕರ 4. ಗಗನ 6. ಗರಿಮುರಿ 7. ಅಂಗಾರಕ 9. ಅರವಿಂದ 11. ಕಡಿವಾಣ 13. ತರಗತಿ 15. ಅನಾಮಿಕ 17. ಗದರು 18. ರಂಜನೆ 19. ಹುಲ್ಲುಗಿಡ

**ಮೇಲಿನಿಂದ ಕೆಳಕ್ಕೆ**

1. ಉರಗ 2. ನಗರ 3. ಆದರ 5. ನಶ್ವರ 7. ಅಂತಕ 8. ಕರಣ 9. ಅನಂತ 10. ದಢೂತಿ 12. ವಾಲಗ 14. ರವಾನೆ 15. ಅರುಹು 16. ಕರಂಡ

ಪ್ರಶ್ನಾಂಕಣ

# ಗೊಂಡ್ವಾನಾ ಲ್ಯಾಂಡ್: ಅದೇನು?

ಗೊಂಡ್ವಾನಾ ಲ್ಯಾಂಡ್ ಅಥವಾ ಗೊಂಡ್ವಾನಾ ಅದೊಂದು ಪ್ರಾಚೀನ ಭೂಖಂಡ. ಸುಮಾರು 180 ದಶಲಕ್ಷ ವರ್ಷ ಹಿಂದೆ ಆಗ ಇದ್ದ ಏಕೈಕ ಮಹಾ ಭೂಖಂಡ (ಸೂಪರ್ ಕಾಂಟಿನೆಂಟ್) ಪಾಂಜಿಯಾ ಇಬ್ಭಾಗವಾಗಿ ಸೀಳಿದಾಗ ಪ್ರತ್ಯೇಕಗೊಂಡ ದಕ್ಷಿಣ ಭಾಗವೇ ಗೊಂಡ್ವಾನಾ ಉತ್ತರದ ಭಾಗವೇ ಲಾರೇಷಿಯಾ (ಚಿತ್ರ 3 ರಲ್ಲಿ ಗಮನಿಸಿ). ಈಗಿನ ದಕ್ಷಿಣ ಅಮೆರಿಕ, ಆಫ್ರಿಕಾ, ಅಂಟಾರ್ಕ್ಟಿಕಾ, ಆಸ್ಟ್ರೇಲಿಯಾ, ಭಾರತ ಉಪಖಂಡ ಮತ್ತು ಅರೇಬಿಯನ್ ಪರ್ಯಾಯ ದ್ವೀಪ ಇವುಗಳೆಲ್ಲ ಗೊಂಡ್ವಾನಾದಲ್ಲಿ ಇದ್ದವು.

ನಿಮಗೇ ತಿಳಿದಂತೆ ಧರೆಯ ಭೂಖಂಡಗಳ ಸ್ಥಾನಗಳು ಸ್ಥಿರವಲ್ಲ. ಅವುಗಳ ಸದ್ಯದ ಸ್ಥಾನಗಳು ಭೂಪಟ 1ರಲ್ಲಿ ಇರುವಂತೆ ಇವೆಯಾದರೂ ಈ ಹಿಂದೆ ಕಾಲದಿಂದ ಕಾಲಕ್ಕೆ ಅವು ಬದಲಾಗುತ್ತಲೇ ಬಂದಿವೆ. ಹಿಂದೊಮ್ಮೆ ಚಿತ್ರ2ರಲ್ಲಿ ಇರುವಂತೆ ವಿನ್ಯಾಸಗೊಂಡಿದ್ದ ಇವೇ ಭೂಖಂಡಗಳು 180 ದಶಲಕ್ಷ ವರ್ಷಗಳ ಹಿಂದೆ ಚಿತ್ರ 3ರಲ್ಲಿರುವಂತೆ ಇದ್ದವು. ಹೀಗಾಗುವುದು ಏಕೆಂದರೆ ಭೂಖಂಡಗಳು ಭೂಕವಚದ ಶಿಲಾಪಾಕದ ಮೇಲೆ ತೇಲುತ್ತಿದ್ದು ನಿರಂತರ ಚಲನಶೀಲವಾಗಿವೆ. ಭೂ ಇತಿಹಾಸದಲ್ಲಿ ಕೆಲವು ಬಾರಿ ಎಲ್ಲ ಭೂಖಂಡಗಳೂ ಒಂದೇ ಕಡೆ ಒಟ್ಟುಗೂಡಿ ಮಹಾನ್ ಭೂಖಂಡಗಳಾಗಿವೆ (ನ್ಯೂನಾ, ರೊಡೀನಿಯಾ, ಪಾನೋಷಿಯಾ ಮತ್ತು ಪಾಂಜಿಯಾ); ನಂತರ ಬೇರ್ಪಟ್ಟು ಚದುರಿವೆ. ಹಾಗೆ ಪಾಂಜಿಯಾ ಸೂಪರ್ ಕಾಂಟಿನೆಂಟ್‌ನಿಂದ ಪ್ರತ್ಯೇಕಗೊಂಡ ಭೂಭಾಗವೇ ಗೊಂಡ್ವಾನಾ.




300 ದಶಲಕ್ಷ ವರ್ಷಗಳ ಹಿಂದೆ ಇದ್ದ ಸೂಪರ್ ಕಾಂಟಿನೆಂಟ್ ಪಾಂಜಿಯಾ 280 ರಿಂದ 230 ದಶಲಕ್ಷ ವರ್ಷ ಹಿಂದಿನ ಸುಮಾರಿಗೆ ಇಬ್ಭಾಗವಾಗಿ ಸೀಳೊಡೆಯಿತು. ತತ್ಪರಿಣಾಮವಾಗಿ ಮೈದಳೆದ ಉತ್ತರದ ಲಾರೇಷಿಯಾ ಮತ್ತೂ ವಿಭಾಗಗೊಂಡು ಉತ್ತರ ಅಮೆರಿಕ, ಯೂರೋಪ್ ಮತ್ತು ಏಷಿಯ ಖಂಡಗಳು ರೂಪುಗೊಂಡವು.

ಹಾಗೆಯೇ ಧರೆಯ ದಕ್ಷಿಣ ಗೋಳಾರ್ಧದತ್ತ ಸಾಗಿದ ಬೃಹತ್ ಭೂಖಂಡ ಗೊಂಡ್ವಾನಾ. ಈ ಭಾರೀ ಭೂಖಂಡದಿಂದ 170 ರಿಂದ 180 ದಶಲಕ್ಷ ವರ್ಷ ಹಿಂದಿನ ಅವಧಿಯಲ್ಲಿ ದಕ್ಷಿಣ ಅಮೆರಿಕ ಮತ್ತು ಆಫ್ರಿಕಾ ಖಂಡಗಳು ಬೇರ್ಪಟ್ಟವು. 140 ದಶಲಕ್ಷ ವರ್ಷ ಹಿಂದಿನ ಸುಮಾರಿಗೆ ಗೊಂಡ್ವಾನಾದ ಉಳಿದ ಭಾಗದಿಂದ ಅಂಟಾರ್ಕ್ಟಿಕಾ ಮತ್ತು ಆಸ್ಟ್ರೇಲಿಯಾ ಖಂಡಗಳು ಹಾಗೂ ಭಾರತ ಉಪಖಂಡ ಪ್ರತ್ಯೇಕಗೊಂಡು ಈಗಿನ ಎಲ್ಲ ಭೂಖಂಡಗಳೂ ನಿಧಾನವಾಗಿ ಚಲಿಸಿ ಚಲಿಸಿ ಪ್ರಸ್ತುತ ಸ್ಥಾನಗಳಲ್ಲಿವೆ.

■ ಎನ್. ವಾಸುದೇವ್